## ಮಹಾನಟಿ: ಮುಜುಗರದ ಸನ್ನಿವೇಶ ಬೇಡ

ಝೀ ಕನ್ನಡದ 'ಮಹಾನಟಿ' ಚೆನ್ನಾಗಿ ಮೂಡಿಬರುವ ಜೊತೆಗೆ ಹೊಸ ನಟಿಯರನ್ನು ಪರಿಚಯಿಸುತ್ತಿದೆ. ಆದರೆ, ಈಚೆಗೆ ಪ್ರಸಾರವಾದ ಎರಡು ಹಾಡುಗಳ ದೃಶ್ಯ ಮುಜುಗರ ಉಂಟುಮಾಡಿತು. ಮಳೆಯಲ್ಲಿ ಒದ್ದೆಯಾಗಿ ಹಿನ್ನೆಲೆ ಹಾಡಿಗೆ ಮಾಡುವ ಡಾನ್ಸ್ ಸನ್ನಿವೇಶ ಮತ್ತು ಅದಕ್ಕೆ ತಕ್ಕಂತೆ ಪರಿಕರಗಳು ಸೂಕ್ತವಾಗಿರಲಿಲ್ಲ. ಆದರೆ, ತೀರ್ಪುಗಾರರು ಅವರ ನಾಟ್ಯ ಮೆಚ್ಚಿ ಬಜರ್ ಒತ್ತಿ ಹುರಿದುಂಬಿಸಿದರು. ಈ ಕಾರ್ಯಕ್ರಮವನ್ನು ಕುಟುಂಬ ಸಹಿತ ನೋಡಲು ಮುಜುಗರ ಅನಿಸಿತು.

—ಭಾರತೀ ಗಂಗಾಧರ್, ಬೆಂಗಳೂರು

## ಕಮಲಾ ಹಂಪನಾಗೆ ಅರ್ಥಪೂರ್ಣ ಗೌರವ

ಕನ್ನಡ ಸಾಹಿತ್ಯದ ಅಪರೂಪದ ದಿಗ್ಗಜ ಜೋಡಿ ಕಮಲಾ ಮತ್ತು ಹಂಪ ನಾಗರಾಜಯ್ಯ ಅವರದು. ಕಮಲಾ ಹಂಪನಾ ನಿಧನವಾದ ದಿನ ಅವರ ಸಂದರ್ಶನವನ್ನು ಮರುಪ್ರಸಾರ ಮಾಡಿದ್ದು ಸಮಯೋಚಿತವಾಗಿತ್ತು. ಕಮಲಾ ಅವರ ಸರಳತೆ, ಅಚ್ಚ ಕನ್ನಡದ ಸಂಭಾಷಣೆ, ಅದರ ಕಂಚಿನ ಹಿತವಾದ ಅನುಭವ ತುಂಬ ಇಷ್ಟವಾಯಿತು. ಕನ್ನಡ ಸಾಹಿತ್ಯವು ಅವರನ್ನು ಕಳೆದುಕೊಂಡಿದ್ದು ನಷ್ಟವೇ ಸರಿ. ಅವರ ಕುರಿತ ಕಾರ್ಯಕ್ರಮ ನೀಡಿದ ಚಂದನಕ್ಕೆ ಧನ್ಯವಾದಗಳು.

—ಕಮಲಾದೇವಿ ರಾಜಶೇಖರ ಹಳ್ಳೂರ್, ಬೆಂಗಳೂರು

## ರಂಜನೆಯೂ ಇಲ್ಲ, ಚಿಂತನೆಯೂ ಇಲ್ಲ

ಸ್ಟಾರ್ ಸುವರ್ಣದ 'ಸುವರ್ಣ ಗೃಹ ಮಂತ್ರಿ' ಕಾರ್ಯಕ್ರಮ ಯಾವುದೇ ದೃಷ್ಟಿಯಿಂದ ನೋಡಿದರೂ ವೀಕ್ಷಕರ ಮನಸ್ಸನ್ನು ಸೆಳೆಯುತ್ತಿಲ್ಲ. ಕಾರ್ಯಕ್ರಮವನ್ನು ಮುನ್ನಡೆಸುತ್ತಿರುವ ಮುರಳಿಯವರ ಅ–ಹಕಾರಗಳ ತಪ್ಪಾದ ಉಚ್ಚರಣೆ, ಭಾಷೆಯ ಏರಿಳಿತಗಳ ದೋಷ ಕಿರಿಕಿರಿ ಅನ್ನಿಸುತ್ತದೆ.

ಪ್ರಾಥಮಿಕ ಶಾಲೆಯ ಮಕ್ಕಳು ಒಂದೇ ಉಸಿರಿನಲ್ಲಿ ಮಗ್ಗಿ ಉರುಹೊಡೆದು ಒಪ್ಪಿಸುವಂತೆ ಸಂಭಾಷಣೆ ಕೇಳಿಸುತ್ತದೆ. ಪ್ರಾಯೋಜಕರ ಹೆಸರು ಹೇಳಲು ಪರದಾಡುವುದು ಒಂದು ಕಡೆಯಾದರೆ – ಸತಿಪತಿ, ಕೈ ತುತ್ತಾ ಸಿಹಿ ಮುತ್ತಾ ಮುಂತಾದ ಐದು ವಿಭಾಗಗಳಲ್ಲಿ ಅಸಂಬದ್ಧ ಪ್ರಶ್ನೆ ಕೇಳುತ್ತಾರೆ. ಪ್ರಾದೇಶಿಕ ಕನ್ನಡ ಭಾಷೆಯ ಸೊಗಡಿನ ಪರಿಚಯವಿಲ್ಲದೆ ಅವರಂತೆಯೇ ಮಾತನಾಡಲು ಹೋಗಿ ನಗೆಪಾಟಲಿಗೆ ಈಡಾದ ಹಲವು ನಿದರ್ಶನಗಳನ್ನು ಗಮನಿಸಬಹುದು. ಈ ಕಾರ್ಯಕ್ರಮ ಬುದ್ಧಿಗೆ ಕೆಲಸವನ್ನೂ ಕೊಡದು, ಮನರಂಜನೆಯನ್ನೂ ನೀಡದು.

—ಸಿಹಿಮೊಗೆ ರಮೇಶ್, ಮೈಸೂರು

ವಾರದ ಪತ್ರ

## ಸ್ಪರ್ಧೆಯಲ್ಲಿ ತಾರತಮ್ಯ ಏಕೆ?




ಕಲರ್ಸ್ ಕನ್ನಡದ 'ನಿನಗಾಗಿ' ಧಾರಾವಾಹಿಯಲ್ಲಿ ವೀಕ್ಷಕರಿಗಾಗಿ ಸ್ಪರ್ಧೆಯನ್ನು ಏರ್ಪಡಿಸಿದ್ದಾರೆ. ಪ್ರಸರಣದ ವೇಳೆ ಕೇಳುವ ಪ್ರಶ್ನೆಗೆ ಸರಿ ಉತ್ತರವನ್ನು ಆಯ್ಕೆ ಮಾಡಿದ ಅದೃಷ್ಟಶಾಲಿ ವಿಜೇತರಿಗೆ ಮೇಕಪ್ ಬಾಕ್ಸ್ ಉಡುಗೊರೆಯಾಗಿ ಕೊಡುತ್ತಾರೆ. ಮೇಕಪ್ ಬಾಕ್ಸ್ ಅಂದರೆ ಮಹಿಳೆಯರಿಗೆಂದೇ ಕೊಡುತ್ತಾರೆ. ಸರಿ ಉತ್ತರ ನೀಡಿದ ಅದೃಷ್ಟವಂತರು ಪುರುಷರಾಗಿದ್ದರೆ? ವಿಜೇತರ ಫೋಟೊ ಪ್ರಸಾರ ಮಾಡಿದಾಗ ಗೊತ್ತಾದ ಸತ್ಯ ಏನೆಂದರೆ, ಸ್ಪರ್ಧೆಯನ್ನು ಮಹಿಳೆಯರಿಗಾಗಿಯೇ ಮಾಡುತ್ತಿದ್ದು, ಅವರನ್ನೇ ಆಯ್ಕೆ ಮಾಡಿದ್ದಾರೆ. ವೀಕ್ಷಕರಲ್ಲಿ ತಾರತಮ್ಯ ಮಾಡಿದ್ದಾರೆ ಎಂದೆನಿಸಿತು.

—ರಘುನಾಥ ರಾವ್ ತಾಪ್ಸೆ, ದಾವಣಗೆರೆ

## ಜಾಹೀರಾತಿಗೆ ಹೊಣೆ ಯಾರು?

ಟೀವಿ ವಾಹಿನಿಗಳಲ್ಲಿ ಬರುವ ದೊಡ್ಡ ಕಂಪನಿಗಳ ಉತ್ಪಾದನೆಗಳೇ ಶ್ರೇಷ್ಠ ಎನ್ನುವುದಕ್ಕೆ ಆಧಾರ ಏನು? ಜಾಹೀರಾತಿನ ರೂಪದರ್ಶಿ ತಮ್ಮ ಲಾಭಕ್ಕಾಗಿ ಚೆನ್ನಾಗಿದೆ ಎಂದೇ ಹೇಳುತ್ತಾರೆ. ಆದರೆ ಅದರ ಅಡ್ಡಪರಿಣಾಮದ ಬಗ್ಗೆ ಯಾರೂ ಮಾತನಾಡುವುದಿಲ್ಲ. ಉತ್ಪನ್ನದ ವಿವರಕ್ಕೆ ಅನುಗುಣವಾಗಿ ಅದಿಲ್ಲದಿದ್ದರೆ, ಅದಕ್ಕೆ ವಿರುದ್ಧವಾಗಿದ್ದರೆ ಅಥವಾ ಬಳಕೆದಾರರ ಮೇಲೆ ಏನಾದರೂ ತೊಂದರೆ ಆದರೆ ಅದಕ್ಕೆಲ್ಲ ಉತ್ಪಾದಕ ಕಂಪನಿ ಮತ್ತು ರೂಪದರ್ಶಿಯನ್ನು ಕಡ್ಡಾಯವಾಗಿ ಹೊಣೆಗಾರರನ್ನಾಗಿ ಮಾಡಿದರೆ ಮಾತ್ರ ನಕಲಿ ಜಾಹೀರಾತು ತಡೆಯಬಹುದು.

—ಕುಬೇರಪ್ಪ ಎಂ. ವಿಭೂತಿ, ಹರಿಹರ

## ಭಾವ ಬೆಸುಗೆಯ ಭಾಗ್ಯ

ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಭಾಗ್ಯಲಕ್ಷ್ಮಿ' ಧಾರಾವಾಹಿ ಭಿನ್ನವಾಗಿ ಮೂಡಿಬರುತ್ತಿದೆ. ಸಂಬಂಧಗಳ ಮಹತ್ವವನ್ನು ಸರಳವಾಗಿ, ನಾಜೂಕಾಗಿ ಮನದಟ್ಟು ಮಾಡುವಂತಿದೆ. ಭಾಗ್ಯಾ, ತಾಂಡವ್, ಕುಸುಮಾ ಒಳಗೊಂಡಂತೆ ಎಲ್ಲಾ ಪಾತ್ರಧಾರಿಗಳೂ ತಮ್ಮ ಪಾತ್ರಗಳಿಗೆ ಜೀವ ತುಂಬುತ್ತಿದ್ದಾರೆ. ಅತ್ತೆ ಪಾತ್ರವಂತೂ ಬಹಳ ಇಷ್ಟವಾಗುವಂತಿದೆ. ಆದರೆ ತಾನು ಕೆಲಸಕ್ಕೆ ಹೋಗುತ್ತಿರುವ ವಿಷಯವನ್ನು ಹೇಳಲು ಭಾಗ್ಯಾ ಅಷ್ಟು ಅಂಜುವುದು ಸಹಜ ಅನ್ನಿಸುವುದಿಲ್ಲ. ಕೆಲವು ಚಿಕ್ಕಪುಟ್ಟ ನ್ಯೂನತೆಗಳ ಹೊರತಾಗಿಯೂ ಧಾರಾವಾಹಿ ಚೆನ್ನಾಗಿದೆ.

—ಸುಮಾ, ಮಂಡ್ಯ

## ರಾಮಾಚಾರಿ: ಬೋರೊ ಬೋರು...

ಕಲರ್ಸ್ ಕನ್ನಡದ 'ರಾಮಾಚಾರಿ' ಧಾರಾವಾಹಿಯ ಗುಣಮಟ್ಟ ಹೇಳತೀರದಷ್ಟು ಕುಸಿದಿದೆ. ಎಷ್ಟೋ ದಿನಗಳ ಹಿಂದೆ ಮುಗಿಯಬೇಕಿದ್ದ ಕಥೆಯನ್ನು ಎಳೆದು ವೀಕ್ಷಕರ ಸಹನೆ ಪರೀಕ್ಷಿಸುತ್ತಿದೆ. ಉದ್ದುದ್ದ ಡೈಲಾಗ್ ಹೊಡೆದರೂ ಕಥೆ ಮಾತ್ರ ಮುಂದೆ ಹೋಗುತ್ತಿಲ್ಲ. ಹರಿಶ್ಚಂದ್ರನ ಹೆಂಡತಿ ಚಂದ್ರಮತಿಯನ್ನೂ ಮೀರಿಸಿ ಅಳುತ್ತಾ ಆಲಾಪ ಮಾಡುವ ಪೋಷಕ ಪಾತ್ರಗಳು ಊಹೆಗೂ ನಿಲುಕದಷ್ಟು ಬೋರ್ ಹೊಡೆಸುತ್ತಿವೆ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## 24 ಗಂಟೆಯಲ್ಲಿ ರಾಷ್ಟ್ರೀಯ ಸುದ್ದಿ ಎಲ್ಲಿ?

ಕಳೆದ ಒಂದು ತಿಂಗಳಿನಿಂದ ಕನ್ನಡ ಸುದ್ದಿ ವಾಹಿನಿಗಳನ್ನು ನೋಡಿದರೆ ಅದರಲ್ಲಿ ರಾಜ್ಯದಲ್ಲಿ ನಡೆದಿರುವ ವಾಲ್ಮೀಕಿ ಸೊಸೈಟಿ ಹಗರಣ, ಪೆನ್ ಡ್ರೈವ್ ಹಗರಣ, ನಟರ ವಿಚ್ಛೇದನ, ದರ್ಶನ್ ಮೇಲಿನ ಆಪಾದನೆ, ರಾಜಕಾರಣಿಯೊಬ್ಬರ ಸಲಿಂಗ ಕಾಮ ಆರೋಪಕ್ಕೆ ಸಂಬಂಧಿಸಿದ ಸುದ್ದಿಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದೆ. ದಿನದ 24 ಗಂಟೆಯ ಸಮಯವೂ ಅದಕ್ಕೆ ಸಾಕಾಗುತ್ತಿಲ್ಲ. ಈ ಧಾವಂತದಲ್ಲಿ ಕನ್ನಡದ ಸುದ್ದಿ ವಾಹಿನಿಗಳು ರಾಷ್ಟ್ರೀಯ ಸುದ್ದಿಗಳಿಗೆ ಮತ್ತು ಜಿಲ್ಲೆ, ಗ್ರಾಮೀಣ ಪ್ರದೇಶದ ಸುದ್ದಿಯೂ ಸೇರಿದಂತೆ ಬೇರೆ ರಾಜ್ಯದ ಮುಖ್ಯ ಸುದ್ದಿಗಳಿಗೆ ಕೊಕ್ ನೀಡಿದಂತೆ ಕಾಣುತ್ತದೆ. ಸುದ್ದಿ ವಾಹಿನಿಗಳಲ್ಲಿ ಕೊಲೆ, ಹಿಂಸೆ ಮತ್ತು ಸೆಕ್ಸ್ ಮೇಲುಗೈ ಪಡೆದಿರುವುದು ದುರಂತ.

—ರಮಾನಂದ ಶರ್ಮಾ, ಬೆಂಗಳೂರು

## ಪ್ರಾಣಿ ಪರಿಸರ ವೀಕ್ಷಣೆಯಿಂದ ಖುಷಿ

ನ್ಯೂಸ್ ಚಾನಲ್‌ಗಳು ಪ್ರಸಾರ ಮಾಡುತ್ತಿರುವ ಸುದ್ದಿಯ ವಿಭಿನ್ನ ನಿಲುವುಗಳು, ವಿವರಣೆಗಳಿಂದಾಗಿ ಟೀವಿ ನೋಡುವ ಮನಸ್ಸು ಆಗುತ್ತಿಲ್ಲ. ಕನ್ನಡ ವಾಹಿನಿಗಳಲ್ಲಿ ಕಾಣಿಸುವ ಏಕತಾನತೆ ಇಂಗ್ಲಿಷ್ ಚಾನಲ್‌ಗಳಲ್ಲಿ ಇಲ್ಲ. ಅಲ್ಲಿ ಸುದ್ದಿ ಪ್ರಸಾರ ಒಂದು ಮಟ್ಟಿಗೆ ಸಹಿಸಿಕೊಳ್ಳಬಹುದು. ಇತ್ತೀಚೆಗಂತೂ ನಮಗೆ ಮನುಷ್ಯ ಸಮಾಜದ ಸುದ್ದಿಗಳ ಪ್ರಸಾರಕ್ಕಿಂತ ಪ್ರಾಣಿ, ಪರಿಸರ, ಸಂಶೋಧನೆಯ ಥೀಮ್ ಇರುವ ನ್ಯಾಷನಲ್ ಜಿಯಾಗ್ರಾಫಿಕ್, ವೈಲ್ಡ್ ಲೈಫ್ ಟೀವಿ ನೋಡಲು ಖುಷಿ ಅನ್ನಿಸುತ್ತದೆ.

—ವೆಂಕಟೇಶ್, ದಾವಣಗೆರೆ